ಸಂಪುಟ : 8 ಸಂಚಿಕೆ : 175 ಪುಟ: 6 ಬೆಲೆ : 3.00 ಮಂಗಳವಾರ ಆಗಸ್ಟ್ 15, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್




# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... Vijayasakshi Kannada Daily ಕನ್ನಡ ದಿನಪತ್ರಿಕೆ

Volume : 8 Issue : 175 Pages : 6 Price : 3.00 Tuesday August 15, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಇಂದಿರಾಗಾಂಧಿ ನರ್ಸಿಂಗ್ ಬಾಲಕಿಯರ ವಿದ್ಯಾರ್ಥಿ ನಿಲಯದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಎಚ್ ಕೆ ಪಾಟೀಲ

# ಅಧಿಕಾರಿಗಳ ಜವಾಬ್ದಾರಿಯಿಂದ ಸಾಕ್ಷರತೆಯ ಕನಸು ಸಾಕಾರಗೊಳ್ಳಲಿ



**■ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಸರ್ಕಾರದಿಂದ ವಸತಿ ನಿಲಯಗಳಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು, ಅದಕ್ಕೆ ತಕ್ಕಂತೆ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವದರ ಮೂಲಕ ಸಾಕ್ಷರತೆಯ ಕನಸು ಸಾಕಾರಗೊಳಿಸುವಂತೆ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಸೂಚಿಸಿದರು.


> ವಸತಿ ನಿಲಯದ ವಿದ್ಯಾರ್ಥಿಗಳಿಗೆ ಕ್ರೀಡಾ ಸಲಕರಣೆಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು. ವಸತಿ ನಿಯಗಳಲ್ಲಿ ವಿದ್ಯಾರ್ಥಿಗಳಿಗೆ ಅಭ್ಯಾಸದ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಗಮನವಹಿಸಬೇಕು. ಅಲ್ಲದೇ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಪೂರೈಕೆಗೆ ಆದ್ಯತೆ ನೀಡುವದರ ಜೊತೆಗೆ ವಸತಿ ನಿಲಯದ ಶ್ರೇಯೋಭಿವೃದ್ಧಿಗೆ ವಸತಿ ನಿಲಯಗಳಲ್ಲಿ ಕಾರ್ಯನಿರ್ವಹಿಸುವ ವಸತಿ ಪಾಲಕರು ಶ್ರಮಿಸಬೇಕು.
>
> **– ಎಚ್ ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.


ನಗರದ ಇಂದಿರಾಗಾಂಧಿ ನರ್ಸಿಂಗ್ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಸೋಮವಾರ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಪ್ರತಿಯೊಂದು ವಸತಿ ನಿಲಯಗಳು ಸುಸಜ್ಜಿತ ಗ್ರಂಥಾಲಯಗಳನ್ನು ಹೊಂದುವದರ ಮೂಲಕ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಜ್ಞಾನಾರ್ಜನೆ ದೊರಕುವಂತಾಗಬೇಕು ಎಂದರು. ಜಿಲ್ಲೆಯಲ್ಲಿನ ಎಲ್ಲ ಅರ್ಹ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಸೌಲಭ್ಯ ದೊರಕುವಂತಾಗಬೇಕು. ಜಿಲ್ಲೆಯ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಸಾಕ್ಷರತೆಯ ಕನಸು ನಮ್ಮದಾಗಿದ್ದು, ಅದನ್ನು ಸಾಕಾರಗೊಳಿಸುವುದು ಇಲಾಖೆಯ ಅಧಿಕಾರಿಗಳ ಮುಖ್ಯ ಜವಾಬ್ದಾರಿಯಾಗಿದೆ ಎಂದು ಸಲಹೆ ನೀಡಿದರು.


ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ರವಿ ಗುಂಜಿಕರ ಮಾತನಾಡಿ, ಗದಗ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಸಾಲಿನಲ್ಲಿ 32 ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ 30 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. 21 ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಲ್ಲಿ 1380 ವಿದ್ಯಾರ್ಥಿಗಳು ಹಾಗೂ 8 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 460 ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದಾರೆ. 32 ವಿದ್ಯಾರ್ಥಿ ನಿಲಯಗಳಲ್ಲಿ 1840 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ವಿದ್ಯಾರ್ಥಿನಿಲಯದದಲ್ಲಿ ವಿವಿಧ ತರಬೇತಿಗಳನ್ನು ಮಕ್ಕಳಿಗಾಗಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ ಅವರು, ವಿದ್ಯಾರ್ಥಿ ನಿಲಯದ ನಿರ್ವಹಣೆ ಕಾರ್ಯಕ್ರಮ ಹಾಗೂ ಕಾರ್ಯ ಸ್ವರೂಪವನ್ನು ಪಿಪಿಟಿ ಮುಖಾಂತರ ಸಭೆಗೆ ವಿವರಿಸಿದರು.

ಸಭೆಯಲ್ಲಿ ಡಾ. ನಾಗನೂರ, ಹುಲಕೋಟಿ ಗ್ರಾ ಪಂ ಮಾಜಿ ಅಧ್ಯಕ್ಷರು, ಸಿದ್ದು ಪಾಟೀಲ, ನಿಲಯ ಪಾಲಕರು, ವಿದ್ಯಾರ್ಥಿನಿಯರು, ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

ನಂತರ ಸಚಿವರು ವಸತಿ ನಿಲಯದ ಅಡುಗೆ ಕೋಣೆ, ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಗೆ ಭೇಟಿ ನೀಡಿ ಪರಿಶೀಲಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ವಸತಿ ನಿಲಯದಲ್ಲಿ ಒದಗಿಸಲಾಗುವ ಸೌಲಭ್ಯ ಹಾಗೂ ಆಹಾರದ ಗುಣಮಟ್ಟದ ಕುರಿತು ಮಾಹಿತಿ ಪಡೆದರು.



ಕರ್ನಾಟಕ ಸರ್ಕಾರ
ಜಿಲ್ಲಾಡಳಿತ, ಗದಗ
ಗದಗ ಜಿಲ್ಲೆಯ
ಸಮಸ್ತ ನಾಗರಿಕರಿಗೆ
77ನೇ ಸ್ವಾತಂತ್ರ್ಯೋತ್ಸವ
ದಿನಾಚರಣೆಯ ಶುಭಾಷಯಗಳು
ಸನ್ಮಾನ್ಯ ಡಾ|| ಎಚ್. ಕೆ. ಪಾಟೀಲ
ಮಾನ್ಯ ಕಾನೂನು, ನ್ಯಾಯ ಹಾಗೂ ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು
ಪ್ರವಾಸೋದ್ಯಮ ಇಲಾಖೆ ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಗದಗ ಜಿಲ್ಲೆಯ ಜನಪ್ರತಿನಿಧಿಗಳು, ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ ಶಕ್ತಿ,
ಅನ್ನಭಾಗ್ಯ, ಗೃಹ ಜ್ಯೋತಿ, ಗೃಹ ಲಕ್ಷ್ಮೀ, ಯುವನಿಧಿ ಫಲಾನುಭವಿಗಳು ಹಾಗೂ ನಾಗರಿಕರಿಗೆ
ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮಕ್ಕೆ
ಆದರದ ಸ್ವಾಗತ
ದಿನಾಂಕ : 15-08-2023 ಮಂಗಳವಾರ ಬೆಳಿಗ್ಗೆ : 9.00 ಗಂಟೆಗೆ
ಸ್ಥಳ : ಕೆ. ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ, ಗದಗ
ವೈಶಾಲಿ ಎಂ. ಎಲ್ ಭಾ.ಆ.ಸೇ
ಅಧ್ಯಕ್ಷರು
ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ
ಹಾಗೂ ಜಿಲ್ಲಾಧಿಕಾರಿಗಳು, ಗದಗ




ನಾಡಿನ ಸಮಸ್ತ ಜನತೆಗೆ
77ನೇ ಸ್ವಾತಂತ್ರ್ಯೋತ್ಸವದ
ಹಾರ್ದಿಕ ಶುಭಾಶಯಗಳು
ಶ್ರೀಮತಿ ಸುನಂದಾ ಪ್ರಕಾಶ ಬಾಕಳೆ
ಉಪಾಧ್ಯಕ್ಷರು,
ಗದಗ-ಬೆಟಗೇರಿ ನಗರಸಭೆ
ಶ್ರೀಮತಿ ಉಷಾ ಮಹೇಶ ದಾಸರ
ಅಧ್ಯಕ್ಷರು,
ಗದಗ-ಬೆಟಗೇರಿ ನಗರಸಭೆ
ಶುಭಾಶಯ ಕೋರುವವರು :
ಗದಗ-ಬೆಟಗೇರಿ ನಗರಸಭೆಯ ಸರ್ವ ಸದಸ್ಯರು
ಪೌರಾಯುಕ್ತರು, ಅಧಿಕಾರಿಗಳು ಹಾಗೂ ಸರ್ವ ಸಿಬ್ಬಂದಿ ವರ್ಗದವರು

## ಸಭಾಪತಿ ಬಸವರಾಜ ಹೊರಟ್ಟಿಗೆ ಗೌರವಾಶೀರ್ವಾದ



■ ವಿಜಯಸಾಕ್ಷಿ ಸುದ್ದಿ, ಮೈಸೂರು

ಪರಿಷತ್ತಿನಲ್ಲಿ ಸತತ 43 ವರ್ಷಗಳ ಕಾಲ ಸಾರ್ಥಕ ಸೇವೆ ಸಲ್ಲಿಸಿದ, ಹಲವು ಬಾರಿ ಸಚಿವರಾಗಿ, ಮೂರನೇ ಬಾರಿ ಸಭಾಪತಿಯಾಗಿ ಸೇವೆ ಸಲ್ಲಿಸುತ್ತಿರುವ ಬಸವರಾಜ್ ಹೊರಟ್ಟಿ ಅವರನ್ನು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಊಟಿಯಲ್ಲಿ ಹೊರಟ್ಟಿಯವರ ಅಭಿಮಾನಿ ಬಳಗದವರು ಹಾಗೂ ಕೊತಗಿರಿ ಲಿಂಗಾಯತ್ ಸಂಘದವರು ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ಹೊರಟ್ಟಿಯವರನ್ನು ಮೈಸೂರಿನ ಸುತ್ತೂರು ಮಹಾಸಂಸ್ಥಾನಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಗೌರವಿಸಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಹೊರಟ್ಟಿಯವರ ಅಭಿಮಾನಿ ಬಳಗದ ನವೀನ ಗೌಡ ಮುಂತಾದವರು ಉಪಸ್ಥಿತರಿದ್ದರು ಎಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

## ಸಾಮಾಜಿಕ ಕ್ರಾಂತಿಯ ಹರಿಕಾರ ಡಿ ದೇವರಾಜ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಕರ್ನಾಟಕ ರಾಜ್ಯದಲ್ಲಿ ಮೌನ ಸಾಮಾಜಿಕ ಕ್ರಾಂತಿಯನ್ನು ಪ್ರಾರಂಭಿಸಿದ ಕೀರ್ತಿ ಡಿ.ದೇವರಾಜ ಅವರಿಗೆ ಸಲ್ಲುತ್ತದೆ. ಅವರು ಬಡವರ ಧ್ವನಿಯಾಗಿದ್ದರು ಮತ್ತು ಸಮಾಜದಲ್ಲಿ ತುಳಿತಕ್ಕೊಳಗಾದವರ ಪರವಾಗಿ ನಿಂತರು ಎಂದು ನಿವೃತ್ತ ಉಪನ್ಯಾಸಕ ದೊಡ್ಡಯ್ಯ ಅರವಟಗಿಮಠ ಹೇಳಿದರು.

ಪಟ್ಟಣದ ಹಿರೇಮಠ ಸಭಾಭವನದಲ್ಲಿ ಭಾನುವಾರ ಸರ್ಕಾರಿ ನಿವೃತ್ತ ನೌಕರರ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಮಾಸಿಕ ಸಭೆಯಲ್ಲಿ ಅವರು ಡಿ. ದೇವರಾಜ ಕುರಿತು ಉಪನ್ಯಾಸ ನೀಡಿದರು.

ಡಿ.ದೇವರಾಜ ಅವರು 1952ರಿಂದ 1980ರವರೆಗೆ 28 ವರ್ಷಗಳ ಕಾಲ ನಿರಂತರವಾಗಿ ಹುಣಸೂರಿನಿಂದ ಶಾಸಕರಾಗಿ ಆಯ್ಕೆಯಾಗಿ, ಕರ್ನಾಟಕದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಮುಖ್ಯಮಂತ್ರಿಗಳಲ್ಲಿ ಒಬ್ಬರು. ಅವರ ಕೊಡುಗೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಶಿಕ್ಷಣ ಮತ್ತು ಹಿಂದುಳಿದ, ಅಲ್ಪಸಂಖ್ಯಾತರ ಹಾಸ್ಟೆಲ್‌ಗಳ ಸ್ಥಾಪನೆಗೆ ಒತ್ತು ನೀಡಿದರು. 1973ರಲ್ಲಿ ಮೈಸೂರನ್ನು ಕರ್ನಾಟಕ ಎಂದು ಮರುನಾಮಕರಣ ಮಾಡುವುದು ಅವರು ತೆಗೆದುಕೊಂಡ ಮಹತ್ವದ ನಿರ್ಧಾರವಾಗಿದೆ ಎಂದರು.

ಅಧ್ಯಕ್ಷ ಡಾ. ಆರ್ ಕೆ ಗಚ್ಚಿನಮಠ ಅಧ್ಯಕ್ಷತೆ ವಹಿಸಿದ್ದರು. ಎಂ ವಿ ಹಿರೇವಡೇಯರ, ಎಸ್ ಎ ಕುಲಕರ್ಣಿ, ಎ ಬಿ ಕುಲಕರ್ಣಿ, ಎಂ ಎಸ್ ಧಡೇಸೂರಮಠ, ಎಸ್ ಕೆ ಪಾಟೀಲ, ವಿ ಬಿ ಕೆರಿಯವರ ಮುಂತಾದವರಿದ್ದರು.

## ಅವಳಿ ನಗರದ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಮಂಗಳವಾರ ನೀರು ಪೂರೈಕೆಯಾಗುವ ಸ್ಥಳಗಳ ವಿವರ ಹೀಗಿದೆ.

ವಾರ್ಡ್ ನಂ.27ರ ಹಮಾಲರ ಪ್ಲಾಟ, ವೀರ ನಾರಾಯಣ ಬಡಾವಣೆ, ಕೆ ಎಚ್ ಪಾಟೀಲ ಬಡಾವಣೆ, ವಾರ್ಡ್ ನಂ. 14, 13ರ ಟ್ಯಾಗೋರ್ ರಸ್ತೆ, ಕೆಲ ಭಾಗಗಳು, ಹಣಗಿ ಜೀನ, ಹಾದಿಮನಿ ವಕೀಲರ ಲೈನ್, ಮುಂಡರಗಿ ಲೈನ್, ಕೆ ಸಿ ಕರಾಣಿ ರಸ್ತೆ, ತೋಪಿಯವರ ಲೈನ್, ಪೊಲೀಸ್ ಕ್ವಾರ್ಟರ್ಸ್ ಲೈನ್, ಹಾದಿಮನಿ ಲೈನ್, ಕಾರಂತ ಲೈನ್, ಪತ್ತೇಪೂರ ಲೈನ್, ಹೆಡ್ ಪೋಸ್ಟ್ ಆಫೀಸ್ ಲೈನ್, ತಡಿಯವರ ಲೈನ್, ಕುರಡಗಿಯವರ ಮನೆ ಲೈನ್, ಜನತಾ ಬಡಾವಣೆ ಲೈನ್, ವಾರ್ಡ್ ನಂ. 12, 13ರಲ್ಲಿ ಇಟಗಿಯವರ ಲೈನ್, ವಾರ್ಡ್ ನಂ. 5, 16, 17ರ ಶಹಪೂರ ಪೇಟೆ, ಜವಳಗಲ್ಲಿ, ಡಿ ಸಿ ಮಿಲ್ ರಸ್ತೆ, ತಡಸಹ ಲೈನ್, ಮಸೀದಿ ಲೈನ್, ಕುಬಸದ ಲೈನ್, ಕಾಡಪ್ಪನವರ ಲೈನ್, ಬಸವೇಶ್ವರ ಲೈನ್, ಪರಪ್ಪರ ಲೈನ್, ಪ್ರಕಾಶವರ ಸಂದಿ, ವಿಜಾಪೂರ ಲೈನ್, ಜಂಗಮನಿಯವರ ಲೈನ್, ಶುದ್ಧ ನೀರಿನ ಘಟಕದ ಭಾಗದಲ್ಲಿ, ವಾರ್ಡ್ ನಂ.16ರ ಡಿ ಸಿ ಮಿಲ್ ರಸ್ತೆ, ಹೆಬ್ಬಳ್ಳಿಯವರ ಲೈನ್, ಎಗ್ ಪಲ್ಲೇದರ ಲೈನ್, ಡೋರಗಲ್ಲಿ ಲೈನ್ ಭಾಗ-1, 2, ವಾರ್ಡ್ ನಂ.26ರ ಕೃಷ್ಣಾ ಟಾಕೀಜ ಲೈನ್, ಕಲಾಮಂದಿರ ರೋಡ್, ಅಕ್ಕನ ಬಳಗ, ಗೊಡಚಿ ಖಾನಾವಳಿ ಲೈನ್, ಮೀನಾಕ್ಷಿ ಭಟ್ಟರ ಲೈನ್, ಜೆ ಟಿ ಮಠ ರೋಡ್, ಅಂಗಡಿಯವರ ಲೈನ್, ತ್ರಿಮೂರ್ತಿ ಲೈನ್, ಚಳ್ಳಮರದ ಲೈನ್, ಮೂರಶಿಳ್ಳಿನ ಲೈನ್, ಕಾಮತ ಹೊಟೇಲ್ ಸಂದಿ ಲೈನ್, ವಾರ್ಡ್ ನಂ.7ರ ಪುಲಿಕೇಶಿ ರಸ್ತೆ, ಬಾಗಲಕೋಟಿಯವರ ಲೈನ್, ಹಳೇ ಪೋಸ್ಟ್ ಆಫೀಸ್ ಲೈನ್, ಪಟ್ಟಣಶೆಟ್ಟರ ಲೈನ್, ಹಕಾರಿಗಲ್ಲಿ, ಕೋಚಿಗಲ್ಲಿ, ರಾಜೀವಪ್ಪನ ಶಾಲೆ ಲೈನ್, ಹುಚ್ಚನಗೌಡ್ರ ಲೈನ್, ಗ್ವಾಡಿಯವರ ಲೈನ್, ವಾಲ್ಮೀಕಿ ನಗರ ಲೈನ್‌ಗಳಲ್ಲಿ ನೀರು ಸರಬರಾಜಾಗಲಿದೆ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗದಗ ಮತಕ್ಷೇತ್ರ ಹಾಗೂ ರಾಜ್ಯದ ಅಭಿವೃದ್ಧಿಗೆ ಮುಗುಳ್ನಗೆಯ ಸರದಾರ

# ಹುಲಕೋಟಿ ಹುಲಿ ಎಚ್.ಕೆ. ಪಾಟೀಲ



ಸರಳ, ಸದಾ ಮುಗುಳ್ನಗೆಯೊಂದಿಗೆ ಹಿರಿ-ಕಿರಿಯರನ್ನು ಒಂದೇ ರೀತಿಯಿಂದ ಕಾಣುವ ಅಪರೂಪದ ರಾಜಕಾರಣಿಗಳಲ್ಲಿ ಹುಲಕೋಟಿಯ ಪ್ರಸ್ತುತ ಸರಕಾರದ ಸಚಿವರಾದ ಹೆಚ್ ಕೆ ಪಾಟೀಲರು ಅದ್ವಿತೀಯರು. ಉತ್ತಮ ನಡೆ-ನುಡಿಗೆ ಹೆಸರಾದ ಹೆಚ್ ಕೆ ಪಾಟೀಲ ಇಡೀ ರಾಜ್ಯವೇ ಹುಲಕೋಟಿಯೆಡೆಗೆ ನೋಡುವ ಹಾಗೆ ಅಭಿವೃದ್ಧಿಪಡಿಸಿ, ತಮಗೆ ನೀಡಿದ ಎಲ್ಲಾ ಇಲಾಖೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಇದೇ ಅಗಸ್ಟ್ 15ಕ್ಕೆ 71ನೇ ವರ್ಷಕ್ಕೆ ಕಾಲಿಡುತ್ತಿರುವ ಹೆಚ್ ಕೆ ಪಾಟೀಲರಿಗೆ ಗದಗ ಜಿಲ್ಲೆಯ ವತಿಯಿಂದ ಶ್ರೀ ಶಿವಚಿದಂಬರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

ಹನುಮಂತಗೌಡ ಕೃಷ್ಣೇಗೌಡ ಪಾಟೀಲ್ 15 ಆಗಸ್ಟ್ 1953ರಂದು ಜನಿಸಿದರು. ಸದ್ಯ ಅವರು ಸಿದ್ದರಾಮಯ್ಯನವರ ನೇತೃತ್ವದ ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಅವರು ಖ್ಯಾತ ರಾಜ-ಕಾರಣಿ, ಕರ್ನಾಟಕ ಸರ್ಕಾರದ ಮಾಜಿ ಸಹಕಾರ ಸಚಿವ ದಿ. ಕೆ ಎಚ್ ಪಾಟೀಲ್ ಅವರ ಮಗ. ಹುಲಕೋಟಿಯ ಹುಲಿ ಎಂದೇ ಜನಪ್ರಿಯವಾಗಿ ಕರೆಯಲ್ಪಡುವ ಪಾಟೀಲರು, ರಾಜ್ಯಾದ್ಯಂತ ನೀರಾವರಿಯ ವಿಸ್ತರಣೆಯೊಂದಿಗೆ ಉತ್ಸಾಹದಿಂದ ತಮ್ಮನ್ನು ತೊಡಗಿಸಿಕೊಂಡಿದ್ದಕ್ಕಾಗಿ ವ್ಯಾಪಕ ಪ್ರಶಂಸೆಗಳನ್ನು ಪಡೆದರು ಮತ್ತು ಕರ್ನಾಟಕದ ಜಲ ಸಂಪನ್ಮೂಲ ಸಚಿವರಾಗಿದ್ದಾಗ ಮೋಡ ಬಿತ್ತನೆಯ ಪ್ರಯತ್ನವನ್ನು ಮುನ್ನಡೆಸಿದರು.

ಹಿರಿಯ ಕಾಂಗ್ರೆಸ್ಸಿಗರಾದ ಅವರು,



ಕರ್ನಾಟಕ ಸರ್ಕಾರದ ಜವಳಿ, ಪ್ರಮುಖ ನೀರಾವರಿ, ಕೃಷಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿ, ವಿರೋಧ ಪಕ್ಷಗಳ ನಾಯಕರೂ ಆಗಿದ್ದವರು. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ, ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯಾಗಿದ್ದ ಅವಧಿಯಲ್ಲಿ, ಕರ್ನಾಟಕ ಸರ್ಕಾರವು 2015-16ನೇ ಸಾಲಿನ ಪಂಚಾಯತ್ ರಾಜ್ ಇಲಾಖೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಐಸಿಟಿಯ ಪರಿಣಾಮಕಾರಿ ಬಳಕೆಗಾಗಿ ಕೇಂದ್ರವು ಸ್ಥಾಪಿಸಿದ ಪ್ರಶಸ್ತಿಯನ್ನು ಪಡೆದುಕೊಂಡಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 24 ಏಪ್ರಿಲ್ 2017ರಂದು ಲಖನೌದಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಕರ್ನಾಟಕ ಸರ್ಕಾರದ ಅವರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು, 2014-15ರಿಂದ 2017-18ರವರೆಗೆ 4 ವರ್ಷಗಳ ಕಾಲ ಸತತವಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿದೆ.

ಈ ಎಲ್ಲ ಶ್ರೇಯಸ್ಸು ಸಚಿವರಾದ ಹೆಚ್ ಕೆ ಪಾಟೀಲರಿಗೆ ಸಲ್ಲುತ್ತದೆ. ಮುಂದಿನ ದಿನಗಳಲ್ಲಿಯೂ ಜಿಲ್ಲೆ ಹಾಗೂ ರಾಜ್ಯ ಶ್ರೀಯುತ ಪಾಟೀಲರಿಂದ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಅಪೇಕ್ಷಿಸುತ್ತದೆ. ಆ ನಿಟ್ಟಿನಲ್ಲಿ ಮಾನ್ಯ ಸಚಿವರು ರಾಜ್ಯದಲ್ಲಿ ಇನ್ನೂ ಹೆಚ್ಚಿನ ಹೊಸ-ಹೊಸ ಯೋಜನೆಗಳನ್ನು ತರುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಾರೆ ಎಂಬ ಆಶಯದೊಂದಿಗೆ...

**– ಚಿದಂಬರ ಪಿ ನಿಂಬರಗಿ.**
ಶಿರೋಳ, ಧಾರವಾಡ.

## ಚನ್ನವೀರ ಶರಣರ ವಿದ್ಯಾಪೀಠದಲ್ಲಿ ಪಾಲಕರ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಸುಕ್ಷೇತ್ರ ಬಳಗಾನೂರಿನ ಚಿಕೇನಕೊಪ್ಪದ ಚನ್ನವೀರಶರಣರ ವಿದ್ಯಾಪೀಠದ ಪೂರ್ವ ಪ್ರಾಥಮಿಕ, ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಪಾಲಕರ ಸಭೆ ಇತ್ತೀಚೆಗೆ ಜರುಗಿತು.

ಸಾನ್ನಿಧ್ಯ ವಹಿಸಿದ್ದ ಶ್ರೀ ಶಿವಶಾಂತವೀರ ಶರಣರು ಆಶೀರ್ವಚನ ನೀಡಿ, ಪಾಲಕರು ಮಕ್ಕಳ ಉತ್ತಮ ಕಲಿಕೆಗೆ ಒತ್ತು ನೀಡುವುದರೊಂದಿಗೆ ಮೌಲ್ಯಯುತ ಬದುಕು ಕಟ್ಟಿಕೊಳ್ಳಲು ಪ್ರೇರೇಪಿಸಿ, ಸದೃಢ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಬೇಕು. ಮುಂಬರುವ ದಿನಗಳಲ್ಲಿ ಶ್ರೀಮಠದ ವಿದ್ಯಾಸಂಸ್ಥೆಯ ನೂತನ ಶಾಲಾ ಕಟ್ಟಡ ನಿರ್ಮಿಸುವ ಸದುದ್ದೇಶ ಹೊಂದಿದೆ ಎಂದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಚಿಕ್ಕೋಡಿಯ ನಿವೃತ್ತ ಉಪನಿರ್ದೇಶಕ ಎಂ ಜಿ ದಾಸರ ಮಾತನಾಡಿ, ಪಾಲಕರು ತಮ್ಮ ಮಕ್ಕಳ ಬಗ್ಗೆ ಪ್ರೀತಿ, ಅಭಿಮಾನ ಹೊಂದುವುದು ಸಹಜ. ಆದರೆ



ಇಂದಿನ ಸಂಕೀರ್ಣ ಬದುಕಿನ ವ್ಯವಸ್ಥೆಯಲ್ಲಿ ಅತಿಯಾದ ಪ್ರೀತಿ ಅಥವಾ ಅತೀಯಾದ ನಿರ್ಲಕ್ಷ್ಯ ಸಲ್ಲದು. ಮಕ್ಕಳನ್ನು ಕೇವಲ ಅಕ್ಷರಸ್ಥರನ್ನಾಗಿಸದೆ, ಆಚಾರವಂತರನ್ನಾಗಿಸುವ ಅನಿವಾರ್ಯತೆ ಇದೆ.

ಆ ದಿಸೆಯಲ್ಲಿ ಪಾಲಕರು ಮಕ್ಕಳ ಚಲನವಲನಗಳನ್ನು ನಿರಂತರವಾಗಿ ಗಮನಿಸಿ, ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕ ವಾತಾವರಣದ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸಬೇಕೆಂದರು.

ಜಮಖಂಡಿಯ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಉಪನಿರ್ದೇಶಕ ಡಿ ಐ ಅಸುಂಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಂಸ್ಥೆಯ ನಿರ್ದೇಶಕರಾದ ಎ ಎನ್ ನಾಗರಳ್ಳಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸ್ಥಳೀಯ ವೈದ್ಯಾಧಿಕಾರಿ ಎಸ್ ರೋಣದ ವೇದಿಕೆಯಲ್ಲಿದ್ದರು. ಸಂಜನಾ ಜಾಧವ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಎಂ ವ್ಹಿ ಪಿರಂಗಿ ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಎಂ ಜಿ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ ವ್ಹಿ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು. ಎಸ್ ಎಸ್ ಪುರಾಣಿಮಠ ವಂದಿಸಿದರು.

## ಕಣಗಿನಹಾಳ ಮೊರಾರ್ಜಿ ದೇಸಾಯಿ ಶಾಲೆಯ ವಿದ್ಯಾರ್ಥಿಗಳ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಗದಗ

ಪಟ್ಟಣದ ಶ್ರೀ ಅನ್ನದಾನೇಶ್ವರ ಪ್ರೌಢಶಾಲೆಯಲ್ಲಿ ಜರುಗಿದ ನರಸಾಪೂರ ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಕಣಗಿನಹಾಳ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ.

ಪ್ರದೀಪ ಕಲ್ಲಗೋಡಿ ವೀರಾಗ್ರಣಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಬಾಲಕರ ವಿಭಾಗದಲ್ಲಿ: 100ಮೀ ಓಟ-ಪ್ರದೀಪ ಕಲ್ಲಗೋಡಿ ಪ್ರಥಮ, ಸಂಜೀವ ತಳವಾರ ದ್ವಿತೀಯ, 200ಮೀ ಓಟ-ರಮೇಶ ಬೀರಣ್ಣವರ ತೃತೀಯ, 400ಮೀ ಓಟ-ಶ್ರೀಕಾಂತ ಲಮಾಣಿ ತೃತೀಯ, 800ಮೀ ಓಟ-ಕಿರಣ ಲಮಾಣಿ ದ್ವಿತೀಯ, ಅಭಿಷೇಕ ಲಮಾಣಿ ತೃತೀಯ, ಗುಂಡು ಎಸೆತ-ಪ್ರದೀಪ ಕಲ್ಲಗೋಡಿ ಪ್ರಥಮ, ಚಂದ್ರು ಕಿಚಾಡಿ ದ್ವಿತೀಯ, ಚಕ್ರ ಎಸೆತ-ಚಂದ್ರು ಕಿಚಾಡಿ ಪ್ರಥಮ, ಅಂಬರೇಶ ಲಮಾಣಿ ದ್ವಿತೀಯ, ಭಲ್ಲೆ ಎಸೆತ-ಪ್ರದೀಪ ಕಲ್ಲಗೋಡಿ



ಪ್ರಥಮ, ಭೀರಪ್ಪ ಹೂಲಿ ದ್ವಿತೀಯ, ಸರಪಳಿ ಗುಂಡು ಎಸೆತ-ಜನಾರ್ಧನ ಮಲ್ಲಾಡದ ಪ್ರಥಮ, ಭೀರಪ್ಪ ಹೂಲಿ ದ್ವಿತೀಯ, ಎತ್ತರ ಜಿಗಿತ-ಸಂಜೀವ ತಳವಾರ ಪ್ರಥಮ, ಕಿರಣ ಲಮಾಣಿ ದ್ವಿತೀಯ, ತ್ರಿವಿಧ ಜಿಗಿತ-ಅಭಿಷೇಕ ಲಮಾಣಿ ತೃತೀಯ, 4*100ಮೀ ರಿಲೆಯಲ್ಲಿ ಪ್ರಥಮ, ಥ್ರೋ ಬಾಲ್ ದ್ವಿತೀಯ, ಖೋ ಖೋ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಬಾಲಕಿಯರ ವಿಭಾಗದಲ್ಲಿ: 400 ಮೀಟರ್ ಓಟ- ಚನ್ನಮ್ಮ ರೋಣದ ಪ್ರಥಮ, ಚಕ್ರ ಎಸೆತ-ರೇಣುಕಾ ಲಮಾಣಿ ಪ್ರಥಮ, ಭಲ್ಲೆ ಎಸೆತ-ಸುನೀತಾ ಲಮಾಣಿ ಪ್ರಥಮ, ಸರಪಳಿ ಗುಂಡು ಎಸೆತ-ಸುನೀತಾ ಲಮಾಣಿ ಪ್ರಥಮ, ತ್ರಿವಿಧ ಜಿಗಿತ-ಚನ್ನಮ್ಮ ರೋಣದ ದ್ವಿತೀಯ, ಎತ್ತರ ಜಿಗಿತ-ಮೇಘಾ ಲಮಾಣಿ ತೃತೀಯ, 4*100ಮೀ ರಿಲೆ ಪ್ರಥಮ, ಥ್ರೋ ಬಾಲ್ ದ್ವಿತೀಯ, ವಾಲಿಬಾಲ್ ದ್ವಿತೀಯ, ಕಬಡ್ಡಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ತಾಲೂಕ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಪ್ರಾಚಾರ್ಯರಾದ ಡಿ ಬಿ ಅಡವಿ, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## 'ಜಿಲ್ಲಾ ಉತ್ತಮ ಶಿಕ್ಷಕ' ಪ್ರಶಸ್ತಿಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕಪ್ಪತ್ತಗಿರಿ ಫೌಂಡೇಶನ್ ಸಾಹಿತ್ಯ-ಸಾಂಸ್ಕೃತಿಕ ಕಲಾವೇದಿಕೆ, ಜಿಲ್ಲಾ ಘಟಕ ಗದಗ ಇವರ ವತಿಯಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ 2023-24ನೇ ಸಾಲಿನ 'ಜಿಲ್ಲಾ ಉತ್ತಮ ಶಿಕ್ಷಕ' ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಆಸಕ್ತರು ಆಗಸ್ಟ್ 25ರ ಒಳಗಾಗಿ ಅರ್ಜಿ ಸಲ್ಲಿಸಬೇಕು.

ಸರಕಾರಿ/ಅನುದಾನಿತ/ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಕಾಲೇಜು ಉಪನ್ಯಾಸಕರು ಶಿಕ್ಷಕರು ಅರ್ಜಿ ಸಲ್ಲಿಸಬಹುದಾಗಿದ್ದು, ಕನಿಷ್ಠ 10 ವರ್ಷ ಸೇವೆ ಪೂರ್ಣವಾಗಿರಬೇಕು, ಸರಕಾರಿ/ಅನುದಾನಿತ/ಅನಿದಾನ ರಹಿತ ಶಾಲಾ-ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರಬೇಕು, ಮುಖ್ಯೋಪಾಧ್ಯಾಯರಿಂದ ಸೇವಾ ಪತ್ರ ಪಡೆದಿರಬೇಕು, ಕಳೆದ 3ವರ್ಷಗಳಲ್ಲಿ ತಾವು ಸೇವೆಯಲ್ಲಿ ಸಲ್ಲಿಸಿದ ವಿಶೇಷ ಸಾಧನೆಯ ಮಾಹಿತಿ ಪುಸ್ತಕ ನೀಡಬೇಕು.

ಗದಗ ಜಿಲ್ಲಾ ಶಿಕ್ಷಕರು/ಉಪನ್ಯಾಸಕರು ಮಾತ್ರ ಅರ್ಜಿ ಹಾಕಲು ಅರ್ಹರು. ಪ್ರತಿ ತಾಲೂಕಿಗೆ ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ವಿಭಾಗಗಳಿಂದ ತಲಾ ಇಬ್ಬರು ಶಿಕ್ಷಕರನ್ನು ಆಯ್ಕೆ ಮಾಡಲಾಗುವದು. ಈ ಎಲ್ಲ ವಿವವರಗಳೊಂದಿಗೆ ಸ್ವವಿವರದ ಮಾಹಿತಿಯನ್ನು ನಿಗದಿತ ದಿನಾಂಕದೊಳಗೆ

ಶ್ರೀಮತಿ ಚಂದ್ರಕಲಾ ಎಂ ಇಟಗಿಮಠ, ರಾಜ್ಯ ಅಧ್ಯಕ್ಷರು, ಕಪ್ಪತ್ತಗಿರಿ ಫೌಂಡೇಶನ್ ಗದಗ (ಮೊ:)77952 93736), ಶ್ರೀಮತಿ ಶೋಭಾ ಎಸ್ ಆಡಿನ, ಜಿಲ್ಲಾ ಅಧ್ಯಕ್ಷರು, ಕಪ್ಪತ್ತಗಿರಿ ಫೌಂಡೇಶನ್ ಗದಗ (ಮೊ: 9019891346) ಇವರಿಗೆ ತಲುಪಿಸುವಂತೆ ಕೋರಲಾಗಿದೆ.

## ಕರ್ನಾಟಕ ಸ್ಪೋರ್ಟ್ಸ್ ಆ್ಯಂಡ್ ಎಜ್ಯುಕೇಶನ್ ಅಕಾಡೆಮಿ ವತಿಯಿಂದ ಧ್ವಜಾರೋಹಣ

■ ವಿಜಯಸಾಕ್ಷಿ ಸುದ್ದಿ, ಗದಗ

76ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕರ್ನಾಟಕ ಸ್ಪೋರ್ಟ್ಸ್ ಅಂಡ್ ಎಜ್ಯುಕೇಶನ್ ಅಕಾಡೆಮಿ ವತಿಯಿಂದ ಶಹರದ ದೋಭಿಘಾಟ ಹತ್ತಿರ ಇರುವ ಫುಟ್ಬಾಲ್ ಮೈದಾನದಲ್ಲಿ ಅಕಾಡೆಮಿಯ ಅಧ್ಯಕ್ಷ ಸರಫರಾಜ ಶೇಖ್ ಅಧ್ಯಕ್ಷತೆಯಲ್ಲಿ ಗದಗ-ಬೆಟಗೇರಿ ನಗರಸಭೆಯ ಪೌರಕಾರ್ಮಿಕ ಮಹಿಳೆ ಮಂಜುಳಾ ಎಗಪಲ್ಲಿ ಇವರಿಂದ ಬೆಳಿಗ್ಗೆ 7 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ನೆರವೇರಲಿದೆ.

ಈ ಸಂದರ್ಭದಲ್ಲಿ ಮುಖಂಡರಾದ ಕೃಷ್ಣೇಗೌಡ ಪಾಟೀಲ್, ಸಿದ್ದಲಿಂಗೇಶ್ವರ ಪಾಟಿಲ್, ಓಂಕಾರ ಓದುಗೌಡರ್, ಪವನ್ ಸಂಗಮ್, ರಾಜಶೇಖರ್ ಲಕ್ಕುಂಡಿ, ಮಂಜುನಾಥ ಗಾಂಜಿ, ಬಸವರಾಜ ಕಬಾಡರ ಮುಂತಾದವರು ಉಪಸ್ಥಿತರಿರುವರು.

ಕ್ರೀಡಾಪಟುಗಳು ಹಾಗೂ ಹಿತೈಷಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ನಗರಸಭೆಯ ಮಾಜಿ ಸದಸ್ಯರಾದ ಎಂ ಸಿ ಶೇಖ ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

## ತರಬೇತಿ ನೀಡಲು ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಗದಗದಲ್ಲಿ ಖೇಲೋ ಇಂಡಿಯಾ ಸ್ಕೈಕ್ಲಿಂಗ್ ಕೇಂದ್ರ ತೆರೆಯಲು ಆಯುಕ್ತರ ಆದೇಶದಲ್ಲಿ ತಿಳಿಸಿದ್ದು, ಗದಗ ಜಿಲ್ಲಾ ಖೇಲೋ ಇಂಡಿಯಾ ಕೇಂದ್ರಕ್ಕೆ ಸ್ಕೈಕ್ಲಿಂಗ್ ತರಬೇತುದಾರರಾಗಲು ಹಾಗೂ ಕ್ರೀಡಾಪಟುಗಳಿಗೆ ತರಬೇತಿದಾರರಾಗಿ ಕಾರ್ಯನಿರ್ವಹಿಸಲು ಸ್ಕೈಕ್ಲಿಂಗ್ ಕೋಚ್ ಹುದ್ದೆಗೆ ಆಗಸ್ಟ್ 19 ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಖೇಲೋ ಇಂಡಿಯಾ ಜಿಲ್ಲಾ ಕೇಂದ್ರಕ್ಕೆ ಸ್ಕೈಕ್ಲಿಂಗ್ ಕೋಚ್ ತರಬೇತುದಾರರ ಹುದ್ದೆಗೆ ಅವಶ್ಯಕತೆ ಇದ್ದು, ಎಲ್ಲಾ ದಾಖಲೆಗಳನ್ನು ದೃಢೀಕೃತ ನಕಲು ಪ್ರತಿ ನೀಡುವುದು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಆಯ್ಕೆ ಸಮಿತಿಯು ತರಬೇತುದಾರರನ್ನು ಆಯ್ಕೆ ಮಾಡಲಿದ್ದು, ತರಬೇತುದಾರರು ರಾಷ್ಟ್ರೀಯ ಮಟ್ಟದ ಸ್ಕೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದವರಾಗಿರಬೇಕು.

ಸ್ಕೈಕ್ಲಿಂಗ್ ಕೋಚ್ ತರಬೇತುದಾರರ ಹುದ್ದೆಗೆ ಅರ್ಜಿ ಸಲ್ಲಿಸಲು ಷರತ್ತುಗಳು ಇಂತಿವೆ. NIS ಸ್ಕೈಕ್ಲಿಂಗ್ ಮಾಡಿದವರಿಗೆ ಹಾಗೂ ಗದಗ ರಹವಾಸಿಯಾಗಿರುವವರಿಗೆ ಪ್ರಥಮ ಆದ್ಯತೆ ನೀಡಲಾಗುವುದು. ದಾಖಲೆಗಳನ್ನು ಪರಿಶೀಲಿಸಿ, ಜಿಲ್ಲಾ ಮಟ್ಟದ ಸಮಿತಿಯಿಂದ ನಡೆಸಲಾಗುವ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಯಾವುದೇ ಶಿಫಾರಸ್ಸುಗಳಿಗೆ ಅವಕಾಶವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ, ಗದಗ ದೂರವಾಣಿ ಸಂಖ್ಯೆ 08372-238345 ಇಲ್ಲಿ ಭರ್ತಿ ಮಾಡಿ ಖುದ್ದಾಗಿ ಸಲ್ಲಿಸಬಹುದಾಗಿದೆ.

### ವಿಲೇಜ್ ಕ್ಲಿನಿಕ್‌ನ ಸುವರ್ಣ ಮಹೋತ್ಸವದಲ್ಲಿ ಸಭಾಪತಿ ಹೊರಟ್ಟಿ ಅಭಿಮತ

# ಡಾ. ರಮಣ್ ರಾವ್ ರೋಗಿಗಳ ಪಾಲಿನ ದೇವರು

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಪದ್ಮಶ್ರೀ ಡಾ. ಬಿ ರಮಣ್‌ರಾವ್ ಅವರ ಸಾರ್ವಜನಿಕ ಸೇವಾ ಮನೋಭಾವ ಶ್ಲಾಘನೀಯವಾದದ್ದು. ಅದಕ್ಕೆ ಎಂದಿಗೂ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಬೆಂಗಳೂರು ಬಳಿಯ ಬೇಗೂರು ಗ್ರಾಮದಲ್ಲಿ ಡಾ. ರಮಣ್‌ರಾವ್ ಅವರು ಸ್ಥಾಪಿಸಿರುವ ವಿಲೇಜ್ ಕ್ಲಿನಿಕ್‌ನ ಸುವರ್ಣ ಮಹೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕಳೆದ ಐವತ್ತು ವರ್ಷಗಳಿಂದ ಡಾ. ರಮಣ್‌ರಾವ್ ಅವರು ಗ್ರಾಮೀಣ ಭಾಗದ ರೋಗಿಗಳ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಹಸ್ತಗುಣ ಚೆನ್ನಾಗಿದೆ. ಹೀಗಾಗಿ ಅವರು ರೋಗಿಗಳ ಪಾಲಿನ ಭಗವಂತನೇ ಆಗಿದ್ದಾರೆ ಎಂದು ಸಭಾಪತಿ ಹೊರಟ್ಟಿ ರಮಣ್‌ರಾವ್



ಅವರನ್ನು ಬಣ್ಣಿಸಿದರು.

ವ್ಯಾಪಾರಿ ಮನೋಭಾವದ ಈ ದಿನಗಳಲ್ಲಿ, ಜನಸಾಮಾನ್ಯರಿಗೆ ವೈದ್ಯಕೀಯ ವೆಚ್ಚ ಭರಿಸುವುದು ಅಷ್ಟು ಸುಲಭವೇನಲ್ಲ. ಆದರೆ ಯಾವುದೇ ಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸುವ ಇಂತಹ ವೈದ್ಯರು ಖಂಡಿತವಾಗಿಯೂ ರೋಗಿಗಳ ಪಾಲಿನ ದೇವರೇ ಆಗಿರುತ್ತಾರೆ. ಕನ್ನಡ ಚಿತ್ರ ರಂಗದ ಮೇರು ನಟ ಡಾ. ರಾಜ್‌ಕುಮಾರ್ ಅವರ ಕುಟುಂಬದ ವೈದ್ಯರಾಗಿರುವ ಡಾ. ರಮಣ್‌ರಾವ್ ಅವರು ಕಳೆದ ವರ್ಷ ನಿಧನರಾದ ಪುನೀತ್‌ರಾಜ್‌ಕುಮಾರ್ ಅವರಿಗೂ ಚಿಕಿತ್ಸೆ ನೀಡಿದ್ದರು. ತಮ್ಮ ಸೇವೆಯನ್ನು ಎಂದಿಗೂ ಪ್ರಚಾರಕ್ಕೆ ಬಳಸಿಕೊಳ್ಳಲು ಮನಸ್ಸು ಮಾಡದ ಅವರನ್ನು ಪದ್ಮಶ್ರೀ ಪ್ರಶಸ್ತಿ ತಾನಾಗಿಯೇ ಹುಡುಕಿಕೊಂಡು ಬಂದಿರುವುದು ಅವರ ಸೇವೆಗೆ ಸಂದ ದೊಡ್ಡ ಗೌರವವಾಗಿದೆ ಎಂದು ಹೊರಟ್ಟಿ ತಿಳಿಸಿದರು.

> ಸಾರ್ವಜನಿಕ ಸೇವೆ ಎಂದರೇನು, ಅದನ್ನು ಹೇಗೆ ಮಾಡಬೇಕೆಂಬುದನ್ನು ನಾವು ಈ ವೈದ್ಯರಿಂದ ಕಲಿಯಬೇಕಿದೆ. ಕೇವಲ ಒಂದು ದಿನ ಉಚಿತ ಚಿಕಿತ್ಸೆ ನೀಡಲು ಹಿಂಜರಿಯುವ ವೈದ್ಯರು ಇರುವ ಈ ಕಾಲದಲ್ಲಿ, ಕಳೆದ ಐವತ್ತು ವರ್ಷಗಳಿಂದಲೂ ಉಚಿತವಾಗಿ ರೋಗಿಗಳ ಸೇವೆ ಮಾಡುತ್ತಿರುವುದು ಡಾ. ರಮಣ್‌ರಾವ್ ಅವರ ಹೆಚ್ಚುಗಾರಿಕೆಯಾಗಿದೆ. ವಿಶೇಷವಾಗಿ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಅವರು ಅತ್ಯುತ್ತಮ ಸೇವೆಯನ್ನು ಸಲ್ಲಿಸುತ್ತ ಅವರ ಪಾಲಿನ ಸಂಜೀವಿನಿ ಆಗಿದ್ದಾರೆ.
>
> **– ಬಸವರಾಜ ಹೊರಟ್ಟಿ.**
> ವಿಧಾನಪರಿಷತ್ತಿನ ಸಭಾಪತಿಗಳು.

ಇಂದು ಇಂತಹ ಪುಣ್ಯ ಕಾರ್ಯಕ್ರಮದಲ್ಲಿ ಭಾಗಿಯಾಗಲು ನನಗೆ ಅವಕಾಶ ಸಿಕ್ಕಿರುವುದು ನನ್ನ ಜೀವನದ ಪುಣ್ಯ ಎಂದುಕೊಂಡಿದ್ದೇನೆ. ಇಷ್ಟು ವರ್ಷಗಳ ಕಾಲ ಜನಸೇವೆ ಮಾಡಲು ಮನೆಯವರ ಸಹಕಾರವೂ ಬೇಕು. ಆ ಸಹಕಾರವನ್ನು ನೀಡಿದ ಡಾ. ರಮಣ್‌ರಾವ್‌ರ ಶ್ರೀಮತಿಯವರನ್ನೂ ತಾವು ಅಭಿನಂದಿಸುವುದಾಗಿ ಹೊರಟ್ಟಿ ತಿಳಿಸಿ, ಡಾ.ರಮಣ್‌ರಾವ್ ದಂಪತಿಗಳಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಮಾದಾರ ಚನ್ನಯ್ಯ ಸ್ವಾಮೀಜಿ, ಗೃಹ ಮಂತ್ರಿ ಡಾ. ಜಿ ಪರಮೇಶ್ವರ, ಶಾಸಕ ಆರ್ ವಿ ದೇಶಪಾಂಡೆ ದಂಪತಿಗಳು, ಶಾಸಕ ಶ್ರೀನಿವಾಸ ಮತ್ತು ಡಾ. ರಮಣ್‌ರಾವ್ ಅವರ ಹಿತೈಷಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ

**ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ-582101**

ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂರವಾಣಿ : 08372-259932

ಇ-ಮೇಲ್ : itstaff.ulb.gadag@gmail.com

ಸಂಖ್ಯೆ: ಗಭನಸ/ವಾನಾಬಾ/2023-24 ದಿನಾಂಕ : 11-08-2023

**ಟೆಂಡರ್ ಪ್ರಕಟಣೆ**

ಗದಗ ಬೆಟಗೇರಿ ನಗರಸಭೆಯ ಮಾನ್ಯ ಅಧ್ಯಕ್ಷರು, ಪೌರಾಯುಕ್ತರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದಿನನಿತ್ಯದ ಕಚೇರಿ ಕೆಲಸಕ್ಕಾಗಿ ವಾಹನವನ್ನು ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ಪಡೆಯಲು KPPP.Portal ಮೂಲಕ ಟೆಂಡರ್ ಆಹ್ವಾನಿಸಿದ. ಇಚ್ಚೆಯುಳ್ಳ ಏಜೆನ್ಸಿ / ಸರಬರಾಜುದಾರರು KPPP.Portal ಮೂಲಕ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ KPPP.Portal ವೆಬ್‌ಸೈಟ್ (https://kppp.karnataka.gov.in) ಮಾಹಿತಿಯನ್ನು ಪಡೆಯಬಹುದು.

(1) ಪೌರಾಯುಕ್ತರ ವಾಹನಕ್ಕಾಗಿ ಕರೆದ ಇಂಡಂಟ್ ನಂಬರ್ DMA/2023-24/SE0571 ರೂ. **12000.00** (2) ಮಾನ್ಯ ಅಧ್ಯಕ್ಷರ ವಾಹನಕ್ಕಾಗಿ ಕರೆದ ಇಂಡೆಂಟ್ ನಂಬರ್ : DMA/2023-24/SE0570 ರೂ. **12000.00** (3) ಸಹಾಯಕ ಕಾರ್ಯಪಾಲಕ ಅಭಿಯಂತರರ ವಾಹನಕ್ಕಾಗಿ ಕರೆದ ಇಂಡೆಂಟ್ ನಂಬರ್: DMA/2023-24/SE0555 ರೂ. **12000.00**

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **24-08-2023** ಸಾಯಂಕಾಲ 4:30 ಗಂಟೆಗೆ (2) ಸ್ವೀಕೃತಗೊಂಡ ಟೆಂಡರ್‌ಗಳ ತೆರೆಯುವ ದಿನಾಂಕ : **25-08-2023** ಸಾಯಂಕಾಲ 5:00 ಗಂಟೆಗೆ

**ಸಹಿ/- ಪೌರಾಯುಕ್ತರು,**
**ನಗರಸಭೆ ಗದಗ-ಬೆಟಗೇರಿ**

**ಸಹಿ/- ಅಧ್ಯಕ್ಷರು**
**ನಗರಸಭೆ ಗದಗ-ಬೆಟಗೇರಿ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/117/2023-24

# ಸಚಿವದ್ವಯರಿಂದ ಮೃಗಾಲಯ ವೀಕ್ಷಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಇಲಾಖೆ ಸಚಿವರಾದ ಈಶ್ವರ ಖಂಡ್ರೆ ಹಾಗೂ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಕೆ ಪಾಟೀಲ ಅವರುಗಳು ರವಿವಾರ ಬಿಂಕದಕಟ್ಟಿಯ ಮೃಗಾಲಯಕ್ಕೆ ಭೇಟಿ ನೀಡಿ ವೀಕ್ಷಣೆ ನಡೆಸಿದರು.

ಮೃಗಾಲಯದಲ್ಲಿನ ಪ್ರಾಣಿ-ಪಕ್ಷಿಗಳ ವೀಕ್ಷಣೆಯ ವೇಳೆ ಗದಗ ಉಸ್ತುವಾರಿ ಸಚಿವರಾದ ಎಚ್ ಕೆ ಪಾಟೀಲ ಅವರು ಮೃಗಾಲಯದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಪ್ರವಾಸಿಗರನ್ನು ಆಕರ್ಷಿಸಲು ಆನೆ, ಜಿರಾಫೆ, ಝೀಬ್ರಾಗಳನ್ನು ಒದಗಿಸುವದರ ಜೊತೆಗೆ ಅವುಗಳ ನಿರ್ವಹಣೆಗಾಗಿ ಅನುದಾನ ನೀಡಬೇಕು. ಗದಗ ಸುತ್ತಮುತ್ತಲಿನ ಭಾಗದಲ್ಲಿ ಇರುವ ಏಕೈಕ ಮೃಗಾಲಯ ಬಿಂಕದಕಟ್ಟಿಯ ಮೃಗಾಲಯವಾಗಿದೆ. ಇದು ಪ್ರವಾಸಿಗರ ಆಕರ್ಷಣೀಯ ಸ್ಥಳವಾಗಿ ಪ್ರಸಿದ್ಧಿಯಾಗಿದ್ದು, ಇನ್ನೂ ಹೆಚ್ಚಿನ ಪ್ರಾಣಿ ಸಂಪತ್ತನ್ನು ಈ ಮೃಗಾಲಯದಲ್ಲಿ ಮಾಡಲು ಸೂಕ್ತ ಸಹಕಾರ ಹಾಗೂ ಅನುದಾನ ಒದಗಿಸುವಂತೆ ಅರಣ್ಯ ಸಚಿವರಾದ ಈಶ್ವರ ಖಂಡ್ರೆ ಅವರಲ್ಲಿ ಕೋರಿದರು.

ಡಾ. ತೋಂಟದ ಸಿದ್ಧರಾಮ ಮಹಾಸ್ವಾಮೀಜಿ, ಶಿವಾನಂದ ಮಹಾಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಎಸ್ ವಿ ಸಂಕನೂರ, ಮಾಜಿ ಶಾಸಕ ಎಸ್ ಎಸ್ ಪಾಟೀಲ, ಧಾರವಾಡ ವಲಯದ ಸಿಸಿಎಫ್ ಯತೀಶಕುಮಾರ, ಡಿಸಿಎಫ್ ದೀಪಿಕಾ ಬಾಜಪೇಯಿ ಸೇರಿದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜಜಿಕರು, ಮಕ್ಕಳು ಇದ್ದರು.

### ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಉದ್ಘಾಟಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ

# ಜನಾಂದೋಲನದೊಂದಿಗೆ ಅರಣ್ಯಕ್ಷೇತ್ರ ಹೆಚ್ಚಿಸಬೇಕಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಮುಂದಿನ ದಿನಮಾನಗಳಲ್ಲಿ ಪ್ರಕೃತಿ ಹಾಗೂ ಪರಿಸರವು ಮನುಕುಲಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಲಿದ್ದು, ಇದನ್ನು ನಿಯಂತ್ರಿಸುವ ಸಲುವಾಗಿ ಈಗಿನಿಂದಲೇ ಗಿಡ-ಮರಗಳ ರಕ್ಷಣೆ ಮಾಡುವದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ನುಡಿದರು.

ಬಿಂಕದಕಟ್ಟಿಯ ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನದಲ್ಲಿ ರವಿವಾರ 100 ಸಸಿಗಳನ್ನು ನೆಡುವ ಕಾರ್ಯ, ಗದಗ ಮೃಗಾಲಯದ ಪಕ್ಷಿಗಳ ದತ್ತು ಸ್ವೀಕಾರ, ರೆಡ್ ಕ್ರಾಸ್ ಸಂಸ್ಥೆಗೆ 1 ಲಕ್ಷ ರೂ. ಶಾಶ್ವತ ಠೇವಣಿ ಯೋಜನೆಯ ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗದಗ ಮೃಗಾಲಯ ಸೇರಿ ಗದಗ ಪ್ರವಾಸೋದ್ಯಮದ ಅಭಿವೃದ್ಧಿಗೆ ಗದಗ ಜಿಲ್ಲೆಗೆ 7 ಕೋಟಿ ರೂ. ನೀಡುವ ಪ್ರಮಾಣಿಕ ಪ್ರಯತ್ನ ಮಾಡಲಾಗುವದು. ಕಪ್ಪತಗುಡ್ಡದಲ್ಲಿ ಇಕೋ ಟೂರಿಸಂ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಹಾಗೂ ಕಪ್ಪತಗುಡ್ಡದ ಬಗ್ಗೆ ಅಧ್ಯಯನ ನಡೆಸಿ ಅದರ ಸಂರಕ್ಷಣೆ ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಕೆ ಪಾಟೀಲ ಮಾತನಾಡಿ, ಗದಗ ಜಿಲ್ಲೆಯ ಅರಣ್ಯ ಹಾಗೂ ಪರಿಸರಕ್ಕೆ ಸಂಬಂಧಿಸಿದಂತೆ 15 ಕೋಟಿ ರೂ. ಅನುದಾನದ ಅವಶ್ಯಕತೆಯಿದೆ. ಕಪ್ಪತಗುಡ್ಡ ರಮಣೀಯ ಸ್ಥಳವಾಗಿದ್ದು, ನಂದಿ ಹಿಲ್ಸ್‌ಗೆ ಸಮನಾಗಿದೆ. ಗದಗ ಮೃಗಾಲಯಕ್ಕೆ ಆನೆ, ಝೀಬ್ರಾ, ಜಿರಾಫೆ ನೀಡಲು ಅರಣ್ಯ ಸಚಿವರು ಈಗಾಗಲೇ ಒಪ್ಪಿಗೆ ಸೂಚಿಸಿದ್ದು, ಅಧಿಕಾರಿಗಳಿಗೆ ಸಿದ್ಧತೆ ಮಾಡುವಂತೆಯೂ ಸೂಚನೆ ನೀಡಿದ್ದಾರೆ ಎಂದರು.

ಗದಗ ಜಿಲ್ಲೆಯು ಪ್ರವಾಸೋದ್ಯಮವನ್ನು ಬೆಳೆಸಬೇಕಾಗಿದೆ. ಲಕ್ಕುಂಡಿ ಯುನೆಸ್ಕೋ ಹೆರಿಟೇಜ್ ಸೈಟ್ ಮಾಡಲು ಶ್ರಮವಹಿಸಬೇಕು ಎಂಬುದಾಗಿ ತಜ್ಞರ ಸಮಿತಿ ಶಿಫಾರಸು ಮಾಡಿರುವುದರಿಂದ ಲಕ್ಕುಂಡಿಯ ಮಹತ್ವ ನಮಗೆ ಅರಿವಿಗೆ ಬರುತ್ತದೆ. ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ 7 ಕೋಟಿ ರೂ. ಅನುದಾನ ಒದಗಿಸಬೇಕು ಎಂದು ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಎಸ್ ವಿ ಸಂಕನೂರ ಮಾತನಾಡಿ, ಕಪ್ಪತಗುಡ್ಡದಲ್ಲಿ 300ಕ್ಕೂ ಹೆಚ್ಚು ಔಷಧೀಯ ಸಸ್ಯಗಳಿದ್ದು, ಪ್ರತಿವರ್ಷ ಬೀಳುವ ಕಾಡ್ಗಿಚ್ಚಿಗೆ ವನ್ಯಜೀವಿಗಳು ಹಾಗೂ ಔಷಧೀಯ ಸಸ್ಯಗಳು ಬಲಿಯಾಗುತ್ತಿವೆ. ಕಪ್ಪತಗುಡ್ಡದ ರಕ್ಷಣೆಗೆ ಸಚಿವರು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮಾಜಿ ಸಚಿವ ಎಸ್ ಎಸ್ ಪಾಟೀಲ ಮಾತನಾಡಿ, ಅರಣ್ಯ ನಾಶದಿಂದ ಪರಿಸರದಲ್ಲಿ ವ್ಯತ್ಯಾಸ ಉಂಟಾಗುತ್ತಿದೆ. ಮೃಗಾಲಯ ಆರಂಭಿಸಬೇಕು ಎಂಬ ಕೆ ಎಚ್ ಪಾಟೀಲರ ಕನಸು ಇಂದು ನನಸಾಗಿದೆ. ಕಪ್ಪತಗುಡ್ಡವನ್ನು ಹಾಳು ಮಾಡಲು ಅವಕಾಶ ನೀಡಬೇಡಿ ಎಂದು ಸಚಿವ ಈಶ್ವರ ಖಂಡ್ರೆ ಅವರಲ್ಲಿ ಮನವಿ ಮಾಡಿದರು.

ಡಾ. ತೋಂಟದ ಸಿದ್ಧರಾಮ ಮಹಾಸ್ವಾಮೀಜಿ, ಶಿವಾನಂದ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಶಾಸಕ ಜಿ ಎಸ್ ಪಾಟೀಲ, ಸಿಸಿಎಫ್ ಯತೀಶಕುಮಾರ, ಡಿಸಿಎಫ್ ದೀಪಿಕಾ ಬಾಜಪೇಯಿ, ಐ ಎಸ್ ಪಾಟೀಲ, ಶಿವಕುಮಾರ ಪಾಟೀಲ, ಉಮೇಶಗೌಡ ಪಾಟೀಲ ಸೇರಿದಂತೆ ಗಣ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.



> ಜಗತ್ತಿನಲ್ಲಿ ತಾಪಮಾನ ಏರಿಕೆಯಾಗುತ್ತಿದ್ದು, ಹವಾಮಾನ ವೈಪರಿತ್ಯದಿಂದ ಬರಗಾಲ, ಅತಿವೃಷ್ಟಿ, ಅನಾವೃಷ್ಟಿಯಿಂದ ಮಾನವ ತತ್ತರಿಸಿ ಹೋಗುತ್ತಿದ್ದಾನೆ. ಗಿಡ-ಮರಗಳ ನಾಶದಿಂದ ಅರಣ್ಯ ಪ್ರದೇಶ ನಾಶವಾಗುತ್ತಿದೆ. ಆಧುನಿಕತೆಯ ಭರದಲ್ಲಿ ಐಷಾರಾಮಿ ಜೀವನ ಸಾಗಿಸಲು ನೀರು, ಆಹಾರ, ಗಾಳಿಯನ್ನು ಸಹ ಕಲುಷಿತಗೊಳಿಸುತ್ತಿದ್ದೇವೆ. ಈ ಕುರಿತು ಜನರಲ್ಲಿ ಪರಿಸರದ ಜಾಗೃತಿಯೊಂದಿಗೆ ಜನಾಂದೋಲನ ಕೈಗೊಂಡು ಅರಣ್ಯ ಕ್ಷೇತ್ರ ಹೆಚ್ಚಿಸಬೇಕಾಗಿದೆ. ಅಲ್ಲದೇ ಪ್ಲಾಸ್ಟಿಕ್ ಬಳಕೆಯನ್ನು ಶಾಶ್ವತವಾಗಿ ನಿಲ್ಲಿಸುವ ಕಡೆ ಗಮನ ಹರಿಸಬೇಕಾಗಿದೆ. ಗಣೇಶೋತ್ಸವಗಳಲ್ಲಿ ಪಿಓಪಿ ಗಣಪತಿ ಮೂರ್ತಿಗಳ ಬದಲಿಗೆ ಮಣ್ಣಿನ ಗಣಪತಿ ಮೂರ್ತಿಗಳನ್ನು ಬಳಸಿ.
>
> **– ಈಶ್ವರ ಖಂಡ್ರೆ.**
> ಅರಣ್ಯ ಸಚಿವರು.

> ಬಂಗಾರಕ್ಕಿಂತ ಪರಿಸರಕ್ಕೆ ಹೆಚ್ಚು ಮಹತ್ವವಿದ್ದು, ಕಪ್ಪತಗುಡ್ಡವನ್ನು ಉದ್ಯಮದ ಹೆಸರಿಲ್ಲಿ ಯಾವ ಕಾರಣಕ್ಕೂ ಹಾಳು ಮಾಡಬಾರದು. ಕಪ್ಪತಗುಡ್ಡ ಅತ್ಯುತ್ತಮ ಶುದ್ಧ ಗಾಳಿ ಸಿಗುವ ಪ್ರದೇಶವಾಗಿದೆ. ಪವನ ವಿದ್ಯುತ್ ಹಾಗೂ ಸೋಲಾರ್ ಮೂಲಕ 2 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಗದಗ ಅರಣ್ಯ ಹಾಗೂ ಪ್ರವಾಸಿ ತಾಣಗಳನ್ನು ದತ್ತು ತೆಗೆದುಕೊಳ್ಳುವಂತೆ ಸಚಿವರಾದ ಎಚ್ ಕೆ ಪಾಟೀಲ ಅರಣ್ಯ ಸಚಿವರಲ್ಲಿ ಬೇಡಿಕೆ ಇಟ್ಟರು.



# ಪಾಲಿ ಕ್ಲಿನಿಕ್ ಕಟ್ಟಡ ಕಾಮಗಾರಿ ವೀಕ್ಷಿಸಿದ ಎಚ್ಕೆ ಪಾಟೀಲ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಾಲಿಕ್ಲಿನಿಕ್ ಕಟ್ಟಡ ಕಾಮಗಾರಿಯನ್ನು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಅವರು ಸೋಮವಾರ ವೀಕ್ಷಿಸಿದರು. ಈ ಸಂದರ್ಭದಲ್ಲಿ ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ ಹುಲಗನ್ನವರ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಾ. ಜನಗಿ, ಸಿದ್ದು ಪಾಟೀಲ ಸೇರಿದಂತೆ ಗಣ್ಯರು ಹಾಜರಿದ್ದರು.

# 'ಸರಿಗಮಪ ರಾಗರಂಜನಿ' ಗ್ರ್ಯಾಂಡ್ ಫಿನಾಲೆ ಇಂದು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

76ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪಟ್ಟಣದ ಸ್ಟಾರ್ ಆಫ್ ಲಕ್ಷ್ಮೇಶ್ವರ ವಾಹಿನಿಯ ವತಿಯಿಂದ ಸರಿಗಮಪ ರಾಗರಂಜನಿ ಗ್ರಾಂಡ್ ಫಿನಾಲೆ ಹಾಗೂ ವೀರ ಯೋಧರಿಗೆ, ರೈತರಿಗೆ ಸನ್ಮಾನ ಸಮಾರಂಭವನ್ನು ಮಂಗಳವಾರ ಸಂಜೆ 4 ಗಂಟೆಗೆ ಪಟ್ಟಣದ ಚೆನ್ನಮ್ಮನವನ ಕಲ್ಯಾಣ ಮಂಟಪ ಹಮ್ಮಿಕೊಳ್ಳಲಾಗಿದೆ ಎಂದು ಆಯೋಜಕ ಸೈಯದ್ ಮಹಬೂಬ್ ಹುಸೇನ್ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಂಗಳವಾರ ನಡೆಯುವ ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು ಹಾಗೂ ಹೂವಿನಶಿಗ್ಲಿ ವಿರಕ್ತಮಠದ ಶ್ರೀ ಚನ್ನವೀರ ಮಹಾಸ್ವಾಮಿಗಳು ವಹಿಸಿಲಿದ್ದು, ಮಾಜಿ ಶಾಸಕರುಗಳಾದ ಗಂಗಣ್ಣ ಮಹಾಂತಶೆಟ್ಟರ, ಜಿ ಎಸ್ ಗಡ್ಡದೇವರಮಠ ಉದ್ಘಾಟಿಸಲಿದ್ದಾರೆ. ಶಾಸಕ ಡಾ. ಚಂದ್ರು ಲಮಾಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಾಹಿತಿ ಜಯಲಕ್ಷ್ಮೀ ಗಡ್ಡದೇವರಮಠ, ಮಾಜಿ ಶಾಸಕರುಗಳಾದ ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಸಣ್ಣವೀರಪ್ಪ ಹಳ್ಳೆಪ್ಪನವರ, ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಬಸವೇಶ್ ಮಹಾಂತಶೆಟ್ಟರ್, ತಹಸೀಲ್ದಾರ್ ಕೆ ಆನಂದಶೀಲ, ಸೋಮೇಶ್ವರ ದೇವಸ್ಥಾನದ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಸರೋಜಕ್ಕ ಬನ್ನೂರು, ಶರಣು ಅಂಗಡಿ, ಗುರುನಾಥ ದಾನಪ್ಪನವರ, ಹಗರಿಬೊಮ್ಮನಹಳ್ಳಿ ಸಿಪಿಐ ವಿಕಾಸ ಲಮಾಣಿ, ವಕೀಲರಾದ ಎಂ ಎಸ್ ದೊಡ್ಡಗೌಡ್ರ ಭಾಗವಹಿಸಲಿದ್ದಾರೆ.

ವೀರ ಯೋಧರಿಗೆ ದೇಶಭಕ್ತಿ ಗೀತೆ ಮೂಲಕ ಗೌರವ ಸಮರ್ಪಣೆ ಸೈಯದ್ ಮಹಬೂಬ್ ಹುಸೈನ್ ಸಂಗಡಿಗರು ಹಾಗೂ ರೈತಗೀತೆ ಮೂಲಕ ಗೌರವ ಸಮರ್ಪಣೆಯನ್ನು ಮಲ್ಲು ಕಳಸಾಪುರ ನೆರವೇರಿಸುವರು. ಅಂತಿಮ ಸುತ್ತಿಗೆ ಆಯ್ಕೆಯಾದ ಸ್ಪರ್ಧಿಗಳ ನಡುವೆ ಸ್ಪರ್ಧೆ ನಡೆಯಲಿದ್ದು, ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದ ದಿಗ್ಗಜರು ನಿರ್ಣಾಯಕರಾಗಿ ಆಗಮಿಸಲಿದ್ದಾರೆ. ಗುರು ಪಂ. ಪುಟ್ಟರಾಜ ಕವಿ ಗವಾಯಿಗಳವರಿಗೆ ಪಟ್ಟಣದ ಶಾರದಾ ಸ್ವರಾಂಜಲಿ ಪಾಠಶಾಲೆ ವಿದ್ಯಾರ್ಥಿಗಳಿಂದ ನುಡಿ ನಮನ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದ್ದಾರೆ.

# ಶೈಕ್ಷಣಿಕ ಶುಲ್ಕ ಮರುಪಾವತಿ ಯೋಜನೆಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ಪಡೆದ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಿಗೆ ಭಾರತ ಸರ್ಕಾರದಿಂದ ನಿಯೋಜಿಸಲ್ಪಟ್ಟ ತಂಡದಲ್ಲಿ ಬಾಗವಹಿಸಿ ಉತ್ತಮ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕವನ್ನು ಅರ್ಹ ಫಲಾನುಭವಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳ ಅಧಿಕೃತ ಬೋಧನಾ ಶುಲ್ಕಗಳನ್ನು ವಾರ್ಷಿಕ ರೂ.50,000-00 ಗಳ ಗರಿಷ್ಟ ಮೊತ್ತಕ್ಕೆ ಮರುಪಾವತಿ ಮಾಡತಕ್ಕದ್ದು. ಇದರಲ್ಲಿ ಕಟ್ಟಡ ಶುಲ್ಕ, ಡೋನೇಷನ್ ನಿರ್ವಹಣಾ ಶುಲ್ಕ, ಸಾಂಸ್ಕೃತಿಕ ಕಾರ್ಯಕ್ರಮ ಶುಲ್ಕ ಇನ್ನಿತರ ಶುಲ್ಕಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ.

ಆಯಾ ವರ್ಷದ ಶೈಕ್ಷಣಿಕ ಶುಲ್ಕವನ್ನು ಹಿಂದಿನ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಿ ನೀಡಲಾಗುವುದು. ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪ್ರತಿನಿಧಿಸಿ ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ಪಡೆದ ಪ್ರಥಮ ಪಿಯುಸಿಯಿಂದ ಸ್ನಾತಕೋತ್ತರ ಪದವಿ (ವೃತ್ತಿಪರ ಕೋರ್ಸ್ ಒಳಗೊಂಡಂತೆ) ವ್ಯಾಸಂಗ ಮಾಡುತ್ತಿರುವ ಕೇಂದ್ರ, ರಾಜ್ಯ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲಾ ಕಾಲೇಜುಗಳ ಕ್ರೀಡಾ ವಿದ್ಯಾರ್ಥಿಗಳು ಅರ್ಹರಿರುತ್ತಾರೆ. ಶೈಕ್ಷಣಿಕ ವರ್ಷದ ಶುಲ್ಕ ಪಾವತಿಸಿದ ರಸೀದಿಗಳೊಂದಿಗೆ ಶಾಲಾ ಮುಖ್ಯೋಪಾಧ್ಯಾಯರು/ ಕಾಲೇಜು ಪ್ರಾಂಶುಪಾಲರ ಮೂಲಕ ದೃಢೀಕರಿಸಿ ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರ ಶಿಫಾರಸ್ಸಿನೊಂದಿಗೆ ಸಲ್ಲಿಸತಕ್ಕದ್ದು.

ಅರ್ಜಿ ನಮೂನೆಗಳು ಕ್ರೀಡಾ ಇಲಾಖೆಯ ಕಚೇರಿಯಲ್ಲಿ ಲಭ್ಯವಿದ್ದು, ಅರ್ಹ ಕ್ರೀಡಾಪಟುಗಳು ಅರ್ಜಿಯನ್ನು ಪಡೆದು ಸೆಪ್ಟೆಂಬರ್ 20 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರನ್ನು ಸಂಪರ್ಕಿಸಬಹುದಾಗಿದೆ.

### ಪ್ರತೀ ಮನೆಯ ಮೇಲೆ ರಾಷ್ಟ್ರ ಧ್ವಜಾರೋಹಣಕ್ಕೆ ಜಿಲ್ಲಾಧಿಕಾರಿಗಳ ಮನವಿ

# 'ಹರ್ ಘರ್ ತಿರಂಗಾ' ಅಭಿಯಾನ ಯಶಸ್ವಿಗೊಳಿಸಿ





■ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಹಮ್ಮಿಕೊಂಡ 'ಹರ್ ಘರ್ ತಿರಂಗಾ' ಅಭಿಯಾನ ಯಶಸ್ವಿಗೊಳಿಸುವ ನಿಟ್ಟಿನಲ್ಲಿ, ಪ್ರತಿಯೊಬ್ಬರೂ ತಮ್ಮ ಮನೆಯ ಮೇಲೆ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಗೌರವ ಸಲ್ಲಿಸುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್ ಕರೆ ನೀಡಿದ್ದಾರೆ.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಸೋಮವಾರ 'ಹರ್ ಘರ್ ತಿರಂಗಾ' ಅಭಿಯಾನದ ಅಂಗವಾಗಿ ಮಾತನಾಡಿದ ಅವರು, ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ನನ್ನ ಮಣ್ಣು ನನ್ನ ದೇಶ' ಕಾರ್ಯಕ್ರಮದಡಿಯಲ್ಲಿ 'ಹರ್ ಘರ್ ತಿರಂಗಾ' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಸಾರ್ವಜನಿಕರೆಲ್ಲರೂ ಭಾರತದ ರಾಷ್ಟ್ರಧ್ವಜಾರೋಹಣವನ್ನು ತಮ್ಮ ಮನೆಗಳ ಮೇಲೆ ಮಾಡುವ ಮೂಲಕ ರಾಷ್ಟ್ರಭಕ್ತಿ ಪ್ರದರ್ಶಿಸಿ, ಗೌರವ ಸಲ್ಲಿಸುವಂತೆ ಸಲಹೆ ನೀಡಿದರು.

ರಾಷ್ಟ್ರಧ್ವಜಾರೋಹಣ ಸಂಧರ್ಭದಲ್ಲಿ ಧ್ವಜ ಸಂಹಿತೆಯನ್ನು ಪಾಲಿಸಿ, ಗೌರವ ಅರ್ಪಿಸಬೇಕು. ಸಾರ್ವಜನಿಕರು ಮನೆಗಳ ಮೇಲೆ, ಸರ್ಕಾರಿ ಕಚೇರಿಗಳ ಮೇಲೆ, ಸಾರ್ವಜನಿಕ ಸ್ಥಳಗಳು, ಉದ್ಯಮಗಳು, ಸಂಘ-ಸಂಸ್ಥೆಗಳಲ್ಲಿ ಸ್ವಯಂ ಪ್ರೇರಿತರಾಗಿ ಧ್ವಜಾರೋಹಣ ಮಾಡಿ ಅಭಿಯಾನವನ್ನು ಯಶಸ್ವಿಗೊಳಿಸಿ.

'ಹರ್ ಘರ್ ತಿರಂಗಾ' ರಾಷ್ಟ್ರಭಕ್ತಿಯ ದ್ಯೋತಕವಾಗಿದೆ. ಜಿಲ್ಲೆಯಲ್ಲಿ ಅಭೂತಪೂರ್ವವಾಗಿ ಯಶಸ್ವಿಗೊಳಿಸಬೇಕು. ರಾಷ್ಟ್ರ ಧ್ವಜಾರೋಹಣ ಮಾಡಿದ ಬಗ್ಗೆ ಸೆಲ್ಫಿಗಳನ್ನು ಹರ್ ಘರ್ ತಿರಂಗಾ ಹ್ಯಾಶ್ ಟ್ಯಾಗ್ ಮೂಲಕ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಸಹ ಮಾಡುವಂತೆ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪವಿಭಾಗಾಧಿಕಾರಿ ಡಾ. ವೆಂಕಟೇಶ ನಾಯ್ಕ, ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವಾಯ್ ಶೆಟ್ಟೆಪ್ಪನವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಅಭಿಯಾನದಲ್ಲಿ ಭಾಗವಹಿಸಿದ್ದರು.

### ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಜಿ ಎಸ್ ಪಾಟೀಲ ಅಭಿಮತ

# ಜಾತಿಗೆ ಸೀಮಿತವಾದ ಸಂಘಟನೆ ಬಹುಕಾಲ ಉಳಿಯದು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಲಿಂಗಾಯತ ಸಮಾಜದ ಒಂದು ಭಾಗವಾಗಿರುವ ಬಣಜಿಗ ಸಂಘದ ಸಮಾಜಮುಖಿ ಕಾರ್ಯವು ಶ್ಲಾಘನೀಯಯಾಗಿದೆ ಎಂದು ರೋಣ ಶಾಸಕ ಜಿ ಎಸ್ ಪಾಟೀಲ ಅಭಿಪ್ರಾಯಪಟ್ಟರು.

ಇಲ್ಲಿನ ರೋಟರಿ ಭವನದಲ್ಲಿ ರವಿವಾರ ಜರುಗಿದ ನರೇಗಲ್ಲ-ಕೋಡಿಕೊಪ್ಪ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ದಶಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಘ-ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದು ಅತ್ಯಂತ ಕಷ್ಟಕರ. ಕಟ್ಟಿ ಬೆಳೆಸಿದ ಸಂಘಗಳನ್ನು ಮುನ್ನಡೆಸಿಕೊಂಡು ಹೋಗುವುದೂ ಸಹ ಅಷ್ಟೇ ಕಷ್ಟದ್ದು. ಆದರೆ ಇಲ್ಲಿನ ಸಮಾಜ ಬಾಂಧವರು ಹತ್ತು ವರ್ಷಗಳ ಕಾಲ ಈ ಸಂಘವನ್ನು ಮುನ್ನಡೆಸಿಕೊಂಡು ಬಂದಿದ್ದು ಒಂದು ಸಾಧನೆಯಾಗಿದೆ ಎಂದು ಶಾಸಕ ಪಾಟೀಲ ಹೇಳಿದರು. ಈ ಸಮಾಜದ ಅನೇಕರು ರಾಜ್ಯದ ಚುಕ್ಕಾಣಿಯನ್ನು ಹಿಡಿದು ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಸಂಘದ ವತಿಯಿಂದ ಸ್ಥಾಪಿಸಲು ನಿರ್ಧರಿಸಿರುವ ವಿದ್ಯಾನಿಧಿ ಯೋಜನೆಗೆ ತಮ್ಮ ವೈಯಕ್ತಿಕ ದೇಣಿಗೆ 1 ಲಕ್ಷ ರೂಪಾಯಿ ನೀಡುವುದಾಗಿ ಶಾಸಕರು ಘೋಷಿಸಿದರು. ನರೇಗಲ್ಲ ಪಟ್ಟಣದಲ್ಲಿ ಬದಲಾವಣೆಗಳನ್ನು ತರಲು ಎಲ್ಲ ಸಿದ್ಧತೆಗಳು ನಡೆದಿವೆ. ನಿರಾಶ್ರಿತರಿಗೆ 500 ಮನೆಗಳನ್ನು ಹಂಚುವ ಕಾರ್ಯವೂ ಪ್ರಗತಿಯಲ್ಲಿದೆ. ಅರ್ಹರಿಗೆ ಮನೆಗಳನ್ನು ಶೀಘ್ರದಲ್ಲಿಯೆ ಹಂಚಲಾಗುತ್ತದೆ ಎಂದು ತಿಳಿಸಿದರು.

ಸಂಗಮೇಶ ಪಟ್ಟಣಶೆಟ್ಟಿ ಪ್ರಾರ್ಥಿಸಿದರು. ಮುಖ್ಯೋಪಾಧ್ಯಾಯ ಎಸ್ ಎನ್ ಹೂಲಗೇರಿ ಸ್ವಾಗತಿಸಿದರು. ಜಿ ಎ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಗಣ್ಯರನ್ನು ಸನ್ಮಾನಿಸಿ, ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ವೇದಿಕೆಯ ಮೇಲೆ ನಿವೃತ್ತ ಪ್ರಾಧ್ಯಾಪಕ ಡಾ. ಎ ಕೆ ನಾಶಿ, ವೀರಣ್ಣ ಶೆಟ್ಟರ, ರೋಣ ತಾಲೂಕಾಧ್ಯಕ್ಷ ಮುತ್ತಣ ಸಂಗಳದ, ಗಜೇಂದ್ರಗಡ ಅಧ್ಯಕ್ಷ ಎಸ್ ಎಸ್ ವಾಲಿ, ರಾಜಣ್ಣ ಹೂಲಿ, ಶಹರ ಘಟಕದ ಕಾಂಗ್ರೆಸ್ ಅಧ್ಯಕ್ಷ ಎಸ್ ಎ ಪಾಟೀಲ, ನಿಂಗಪ್ಪ ಲಕ್ಕನಗೌಡ್ರ, ಅಲ್ಲಾಭಕ್ಷಿ ನದಾಫ್, ಬಸವರಾಜ ವಂಕಲಕುಂಟಿ, ರಾಜಶೇಖರ ವಂಕಲಕುಂಟಿ, ಕೆಂಗಾರ ಶೇಖಪ್ಪ ಮುಂತಾದವರಿದ್ದರು. ಹಿರಿಯರಾದ ಸಿ ವಿ ವಂಕಲಕುಂಟಿ ಪ್ರಾಸ್ತಾವಿಕವಾಗಿ ಮಾತನಾಡಿ ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಶಿವಯೋಗಿ ಜಕ್ಕಲಿ ನಿರೂಪಿಸಿ, ವಂದಿಸಿದರು.



> ವೈಯಕ್ತಿಕ ಸಮಾಜಕ್ಕಾಗಿ ಬಡಿದಾಡದೆ, ಸಮಗ್ರ ಲಿಂಗಾಯತ ಧರ್ಮಕ್ಕಾಗಿ ಬಡಿದಾಡುವ ಕನಸನ್ನು ಇಟ್ಟುಕೊಂಡಿರುವ ಈ ಸಂಘದ ಉದ್ದೇಶವನ್ನು ಎಲ್ಲರೂ ಮೆಚ್ಚಬೇಕು. ಶ್ರೀಶೈಲ ಜಗದ್ಗುರುಗಳು ಇದಕ್ಕಾಗಿ ಶ್ರಮಿಸುತ್ತಿದ್ದು, ಜಗದ್ಗುರುಗಳನ್ನು ನಾವೆಲ್ಲರೂ ಬೆಂಬಲಿಸಬೇಕು. ಜಾತಿಗೆ ಸೀಮಿತಗೊಳಿಸಿ ಸಂಘಟನೆಗಳನ್ನು ಕಟ್ಟಿದರೆ ಅವು ಬಹಳ ದಿನ ಉಳಿಯುವುದಿಲ್ಲ. ಬದಲಾಗಿ ಲಿಂಗಾಯತ ಪಂಗಡಗಳೆಲ್ಲವನ್ನು ಒಂದುಗೂಡಿಸುವ ಕಾರ್ಯಕ್ಕೆ ಎಲ್ಲರೂ ಮನಸ್ಸು ಮಾಡಬೇಕು.
>
> **– ಜಿ ಎಸ್ ಪಾಟೀಲ.**
> ಶಾಸಕರು, ರೋಣ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka

# ರಾಜ್ಯದ ಅಭಿವೃದ್ಧಿಯಲ್ಲಿ ಹಿನ್ನಡೆಯಾಗಿದೆ; ಅಲ್ಕೋಡ್ ಹನುಮಂತಪ್ಪ

**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗುತ್ತಿದೆ. ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿದ್ದು, ಸರಿಯಾದ ರೀತಿಯಲ್ಲಿ ಆಡಳಿತ ನಡೆಸುತ್ತಿಲ್ಲ. ಇದನ್ನು ಖಂಡಿಸಿ ಜೆಡಿಎಸ್‌ನಿಂದ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಹೋರಾಟವನ್ನು ಕೈಗೊಳ್ಳಲಾಗುವುದು ಎಂದು ಮಾಜಿ ಸಚಿವ ಆಲ್ಕೊಡ ಹನುಮಂತಪ್ಪ ಹೇಳಿದರು.



ಪಟ್ಟಣದ ಕಾವೇರಿ ಹೋಟೆಲ್‌ನಲ್ಲಿ ಜೆಡಿಎಸ್ ತಾಲೂಕು ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುತ್ತೇವೆ ಎಂದಿದ್ದ ಕಾಂಗ್ರೆಸ್‌ನವರು, ಈಗ ಅಧಿಕಾರಕ್ಕೆ ಬಂದ ಮೇಲೆ ಕೆಲವೊಂದು ಯೋಜನೆ ಜಾರಿ ಮಾಡಿ ಅವುಗಳನ್ನು ಪಡೆದುಕೊಳ್ಳುವುದಕ್ಕೆ ಕೆಲವು ಷರತ್ತುಗಳನ್ನೂ ಹಾಕಲಾಗುತ್ತಿದೆ. ಇದು ಸರಿಯಾದ ಕ್ರಮವಲ್ಲ ಎಂದರು.

ಎಸ್ಸಿಪಿ, ಟಿಎಸ್ಪಿ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಬೇರೆ ಯೋಜನೆಗಳಿಗೆ ಅದನ್ನು ಉಪಯೋಗಿಸಬಾರದು. ಆದರೆ ಸರ್ಕಾರವು ಅದನ್ನು ಐದು ಗ್ಯಾರಂಟಿ ಯೋಜನೆಗೆ ಬಳಕೆ ಮಾಡಲು ಮುಂದಾಗಿದೆ. ಒಟ್ಟಾರೆ ಎಸ್ಸಿಪಿ, ಟಿಎಸ್ಪಿ ಅನುದಾನವು ಸಮರ್ಪಕವಾಗಿ ಸದ್ಬಳಕೆಯಾಗಬೇಕು.

ಅದರ ಅನುದಾನ ದುರ್ಬಳಕೆಯಾಗಿದ್ದರೆ ಸರ್ಕಾರ ಅಂತವರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಅನಿಲಕುಮಾರ, ತಾಲೂಕು ಘಟಕಾಧ್ಯಕ್ಷ ಜಿ.ಕೆ ಕೊಳ್ಳಿಮಠ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಮಂಜುಳಾ ಮೇಟಿ, ರಮೇಶ ಕಲಬುರ್ಗಿ, ರಫೀಕ್ ಹವಾಲ್ದಾರ್, ಅಶೋಕ ತ್ಯಾಮನವರ, ಜಯಶ್ರೀ ಬಂಡಿವಡ್ಡರ, ಮಂಜುನಾಥ ದೊಡ್ಡಮನಿ, ದೇವರಡ್ಡಿ ರಾಜೂರು, ಮಹಾದೇವರಡ್ಡಿ, ಬಸವನಗೌಡ ನಾಡಗೌಡ್ರ, ಉಮೇಶ ಹಿರೇಮಠ, ಶೇಖರ ಗೌರಿಪುರ, ಮೌಲಾಹುಸೇನ ತಾಂಬೂಲಿ ಮುಂತಾದವರು ಸಭೆಯಲ್ಲಿದ್ದರು.

# ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಉಸ್ತುವಾರಿ ಸಚಿವ



**■ ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಸೋಮವಾರ ಸಾಯಂಕಾಲ ನಗರದ ಕಾಟನ್ ಸೇಲ್ ಸೊಸೈಟಿಯ ತಮ್ಮ ಕಾರ್ಯಾಲಯದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದ ಅವರು, ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಕೂಡಲೆ ಸಮಸ್ಯೆ ಪರಿಹಾರಕ್ಕಾಗಿ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು. ಈ ಕಾರ್ಯದಲ್ಲಿ ಉದಾಸೀನತೆ ತೋರದೆ ಸಾರ್ವಜನಿಕರ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸಲು ತಿಳಿಸಿದರು.

ಆಶ್ರಯ ಮನೆ ಮಂಜೂರಾತಿ, ವಿದ್ಯಾರ್ಥಿಗಳ ಶಿಷ್ಯವೇತನ,


ವಿಕಲಚೇತನರು ಸರ್ಕಾರದ ಯೋಜನೆಗಳಡಿ ಒದಗಿಸಲಾಗುವ ವಿವಿಧ ಸಾಧನ ಸಲಕರಣೆಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಸಾರ್ವಜನಿಕರು ಸಲ್ಲಿಸಿದ ಮನವಿಗಳನ್ನು ಸಚಿವ ಎಚ್.ಕೆ.ಪಾಟೀಲ ಅವರು ಸಂಯಮದಿಂದ ಸ್ವೀಕರಿಸಿ ಸಮಸ್ಯೆಗಳ ಪರಿಹಾರಕ್ಕೆ ಆಶ್ವಾಸನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.














ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
"ಸಾಮಾಜಿಕ ಸ್ವಾತಂತ್ರ್ಯ ಸಾಧಿಸದ ಹೊರತು ಕಾನೂನಿನ ಮೂಲಕ ನೀಡುವ ಯಾವುದೇ ರೀತಿಯ ಸ್ವಾತಂತ್ರ್ಯ ನಿಷ್ಪ್ರಯೋಜಕವಾಗುವುದು."
- ಡಾ. ಬಿ. ಆರ್. ಅಂಬೇಡ್ಕರ್
77ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪಮುಖ್ಯಮಂತ್ರಿಗಳು ಪಂಚ ಯೋಜನೆ ಘೋಷಿಸಿದ ಸುಸಂದರ್ಭ.
ಶಕ್ತಿ
ಮಹಿಳೆಯರಿಗೆ ಬಸ್ ಸಂಚಾರ ಉಚಿತ
ಅನ್ನಭಾಗ್ಯ
10kg
ಬಡವರಿಗೆ ಪ್ರತಿ ತಿಂಗಳು ತಲಾ 10Kg ಆಹಾರಧಾನ್ಯ ಅಥವಾ ತಲಾ 5Kg ಆಹಾರಧಾನ್ಯ ಹಾಗೂ ರೂ. 170/-
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು
₹2000
ಗೃಹ ಜ್ಯೋತಿ
ಪ್ರತಿ ಮನೆಗೆ ಗರಿಷ್ಠ
200
ಯೂನಿಟ್ ವಿದ್ಯುತ್ ಉಚಿತ
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
ಪ್ರಗತಿಪರ ಅಭಿವೃದ್ಧಿಗಾಗಿ ನುಡಿದಂತೆ ನಡೆದಿದ್ದೇವೆ...
ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಕೊಟ್ಟವರ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.
ಕರ್ನಾಟಕ ವಾರ್ತೆ